ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

Website: www.hims-hassan.org, Phone/Fax No.08172-231699/ 231599 , Email: directorhims@yahoo.com

## 9ನೇ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 23-06-2016ರಂದು

ಮಧ್ಯಾಹ್ನ:3-00ಗಂಟೆಗೆ

**ಸ್ಥಳ:**

ನಿರ್ದೇಶಕರು,

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,

ಆನಂದರಾವ್ ವೃತ್ತ, ಬೆಂಗಳೂರು.

ಜಾರ್ಜಾರ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
Directorate of Medical Education.

ಆನಂದರಾವ್ ವೃತ್ತ, ಬೆಂಗಳೂರು-9
Ananda Rao Circle, Bangalore-9
email:
dmekarnataka@yahoo.com

**ದಿನಾಂಕ: 23-06-2016ರಂದು ಹಾಸನ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಹಾಸನ ಇಲ್ಲಿನ ಆಸ್ಪತ್ರೆಯ ಪ್ರಯೋಗಾಲಯಕ್ಕೆ ಉಪಯೋಗಿಸಲು ಅವಶ್ಯವಿರುವ ರಾಸಾಯನಿಕ, ರಿಜೆಂಡ್ಸ್, ಕಿಟ್ಸ್, ಗ್ಲಾಸ್‌ವೇರ್ಸ್, ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕವಿರುವ ಮೆಡಿಕಲ್ ಜರ್ನಲ್, ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್, ಪ್ರಿಂಟರ್, ಸ್ಟೆತೋಸ್ಕೋಪ್ ಮತ್ತು ಆಸ್ಪತ್ರೆ ರೋಗಿಗಳಿಗೆ ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್ ಖರೀದಿಸುವ ಸಲುವಾಗಿ ಕರೆದಿರುವ ಟೆಂಡರ್‌ಗಳಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಕೊಠಡಿಯಲ್ಲಿ ನಡೆದ ಖರೀದಿ ಸಮಿತಿಯ ಸಭಾನಡವಳಿಗಳು:**

ಟೆಂಡರ್ ಪ್ರಕಟಣೆ ಸಂಖ್ಯೆ: **1. HIMS/SCH/KR/Ten/03/2015-16.**
**2. HIMS /Ten/CL/02/2015-16.**
**3.HIMS/AC/SCP/TSP/04/2015-16.**
**4. HIMS/SCH/FOOD/198/2015-16.**

**ಹಾಜರಿದ್ದ ಸದಸ್ಯರು:05**

| ಕ್ರ.ಸಂ | ಅಧಿಕಾರಿಗಳ ಹೆಸರು | ಹುದ್ದೆ |
|---|---|---|
| 1 | ಡಾ.ಹರಸೂರ್ ಎಸ್.ಎಸ್., ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಖರೀದಿ ಸಮಿತಿಯ ಅಧ್ಯಕ್ಷರು |
| 2 | ಡಾ.ಬಿ.ಸಿ.ರವಿಕುಮಾರ್ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 3 | ಡಾ.ವಿಠ್ಠಲ್ ಬಿ.ಜಿ. ವಿಭಾಗದ ಮುಖ್ಯಸ್ಥರು, ಜೀವರಸಾಯನ ಶಾಸ್ತ್ರ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 4 | ಡಾ.ವೆಂಕಟೇಶ್ ಡಿ.ಟಿ. ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಮಿಣಿಜೀವ ಶಾಸ್ತ್ರ ವಿಭಾಗ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 5 | ಶ್ರೀ ದೇವಯ್ಯ, ಮುಖ್ಯ ಆಡಳಿತಾಧಿಕಾರಿಗಳು,(ಪ್ರಭಾರ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿಗಳು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಸ್ವಾಗತಿಸುತ್ತಾ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ಕರೆದಿರುವ ಟೆಂಡರ್‌ಗಳ ಬಗ್ಗೆ ಚರ್ಚಿಸಲು ಈ ಸಭೆ ಕರೆಯಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಟೆಂಡರ್‌ನ ಬಗ್ಗೆ ಎಫ್.ಸಿ.ಯಿಂದ ಮತ್ತು ಜೆ.ಸಿ.ಯಿಂದ ಅನುಮೋದನೆ ಪಡೆಯಲಾಗಿದೆಯೇ, Need Assessment ನ ಪ್ರಕಾರ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು / ತಜ್ಞರು ದೃಢೀಕರಿಸಿ ಸಹಿ ಮಾಡಿರುವರೇ, ಸಂಬಂಧಪಟ್ಟ ವಿಭಾಗದಿಂದ ಬೇಡಿಕೆ ಪತ್ರ ಬಂದಿದೆಯೇ, ಮೂಲಭೂತ ಸೌಕರ್ಯಗಳು ಇದೆಯೇ, ಅನುಭವವಿರುವ ಅಥವಾ ತರಬೇತಿ ಹೊಂದಿದ ತಜ್ಞರು ಇರುವರೇ, ತಾಂತ್ರಿಕ ವಿವರ ಯಾರಿಂದ ಪಡೆಯಲಾಯಿತು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮ 2000ರ ಉಪಬಂಧ-9, 10 & 11 ರ ಪ್ರಕಾರ ಟೆಂಡರ್ ತೆರೆಯುವ ಸಮಿತಿ, ಟೆಂಡರ್ ಪರಿಶೀಲನಾ ಸಮಿತಿ – 1. ವಾಣಿಜ್ಯ ವಿವರ: 2. ತಾಂತ್ರಿಕ ವಿವರ ಮತ್ತು ಟೆಂಡರ್ ಅಂಗೀಕಾರ ಸಮಿತಿಯನ್ನು ರಚಿಸಲಾಗಿದೆಯೇ ಎಂಬುದರ ಬಗ್ಗೆ ವಿವರವಾಗಿ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿದರು.

ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಕರೆದು ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಟೆಂಡರ್‌ನ ವಿವಿಧ ಹಂತದ ಪ್ರಕ್ರಿಯೆ ಮುಗಿಸಲಾಗಿದೆ ಎಂದು ಸಭೆಗೆ ತಿಳಿಸಿದರು, ಹಾಗೂ ವಿಷಯ ತಜ್ಞರುಗಳು ಈ ಟೆಂಡರ್‌ನಲ್ಲಿ ಕರೆದಿರುವ ಆಸ್ಪತ್ರೆಯ ದೈನಂದಿನ ಉಪಯೋಗಕ್ಕಾಗಿ ಅವಶ್ಯವಿರುವ **ರಾಸಾಯನಿಕ, ರಿಜೆಂಡ್ಸ್, ಕಿಟ್ಸ್, ಗ್ಲಾಸ್‌ವೇರ್ಸ್, ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕವಿರುವ ಮೆಡಿಕಲ್ ಜರ್ನಲ್, ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್, ಪ್ರಿಂಟರ್, ಸ್ಟೆತೋಸ್ಕೋಪ್ ಮತ್ತು ಆಸ್ಪತ್ರೆ ರೋಗಿಗಳಿಗೆ ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್** ಖರೀದಿಸುವ ಸಲಕರಣೆಗಳಿಗೆ ಎಲ್ಲಾ ಐಟಮ್ಸ್‌ಗಳನ್ನು ಉಪಯೋಗಿಸಲು ಸಲಕರಣೆಗಳು ಮತ್ತು ಅನುಭವವಿರುವ ತಜ್ಞರು ಇದ್ದಾರೆ ಎಂದು ಸಭೆಗೆ ತಿಳಿಸಿದರು ಮತ್ತು ಎಲ್ಲಾ ಐಟಮ್ಸ್‌ಗಳಿಗೆ ಸಮಿತಿಯ ಅಧ್ಯಕ್ಷರು ಆದೇಶ ನೀಡುವುದಕ್ಕೆ ಮುನ್ನ ಸಂಸ್ಥೆಯವರೊಂದಿಗೆ ದರ ನಿಷ್ಕರ್ಷೆ ನಡೆಸಿ ಮಾರುಕಟ್ಟೆ ದರಕ್ಕೆ ಸಮೀಪದಲ್ಲಿರುವಂತೆ ಹಾಗೂ ಸ್ವೀಕೃತಗೊಂಡ ಟೆಂಡರ್‌ದಾರರು ಈ ಹಿಂದೆ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆ / ಕಾಲೇಜುಗಳಿಗೆ ಸರಬರಾಜು ಮಾಡಿರುವ ಸರಬರಾಜು ಆದೇಶವನ್ನು ಸಹ ಪರಿಶೀಲಿಸಿ ನಂತರ ಖರೀದಿಸುವ ಪ್ರಕ್ರಿಯೆ ಪ್ರಾರಂಭಿಸಬೇಕೆಂದು ಸಭೆಗೆ ತಿಳಿಸಿದರು. ಅದಕ್ಕೆ ಸಂಸ್ಥೆಯ ನಿರ್ದೇಶಕರು ತಾವು ಈಗಾಗಲೇ ಸ್ವೀಕೃತಗೊಂಡ ಎಲ್-1 ಟೆಂಡರ್‌ದಾರರಿಂದ ದರನಿಷ್ಕರ್ಷೆ ನಡೆಸಲಾಗಿದೆ ಎಂದು ಸಭೆಗೆ ತಿಳಿಸಿದರು.

ನಂತರ ಸಮಿತಿಯ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಟೆಂಡರ್‌ನಲ್ಲಿ ಕರೆದಿರುವ **ರಾಸಾಯನಿಕ, ರಿಜೆಂಡ್ಸ್, ಕಿಟ್ಸ್, ಗ್ಲಾಸ್‌ವೇರ್ಸ್, ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕವಿರುವ ಮೆಡಿಕಲ್ ಜರ್ನಲ್, ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್, ಪ್ರಿಂಟರ್, ಸ್ಟೆತೋಸ್ಕೋಪ್ ಮತ್ತು ಆಸ್ಪತ್ರೆ ರೋಗಿಗಳಿಗೆ ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್‌ಗಳ** ಬಗ್ಗೆ ಪ್ರತ್ಯೇಕ ಕಡತಗಳನ್ನು ಪರಿಶೀಲಿಸಲಾಯಿತು. ವಿವರ ಈ ಕೆಳಕಂಡಂತಿದೆ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಜೆಂಡಾ-01 - ಟೆಂಡರ್ ಪ್ರಕಟಣೆ ಸಂಖ್ಯೆ: **HIMS/SCH/KR/Ten/03/2015-16.** ಈ ಟೆಂಡರ್‌ನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಟೆಂಡರ್‌ನಲ್ಲಿ G.C. ಹಾಗೂ F.C ಯಿಂದ ಅನುಮತಿ ಪಡೆಯಲಾಗಿದೆ ಇದು ಸಭೆಯ ಗಮನಕ್ಕೆ ಬಂದಿರುತ್ತದೆ. ಜಿಲ್ಲಾ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಿರುವ ಬಗ್ಗೆ ಮಾಹಿತಿ ಇದೆ. ಟೆಂಡರ್‌ನ ವಿವಿಧ ಪ್ರಕ್ರಿಯೆಗಳನ್ನು ಮಾಡಿರುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಸಮಿತಿಯ ತೀರ್ಮಾನ:

ಈ ಮೇಲ್ಕಂಡ **ರಾಸಾಯನಿಕ, ರಿಜೆಂಡ್ಸ್, ಕಿಟ್ಸ್, ಗ್ಲಾಸ್‌ವೇರ್ಸ್** ಬಗ್ಗೆ ಸಂಬಂಧಪಟ್ಟ ವಿಭಾಗದ ವಿಷಯ ತಜ್ಞರೊಂದಿಗೆ ಚರ್ಚಿಸಿ ಮತ್ತು ಸ್ವೀಕೃತಗೊಂಡ ಎಲ್-1 ದರಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, **ರಾಸಾಯನಿಕ, ರಿಜೆಂಡ್ಸ್, ಕಿಟ್ಸ್, ಗ್ಲಾಸ್‌ವೇರ್ಸ್** ಟೆಂಡರ್‌ನಲ್ಲಿ ಒಟ್ಟು 502 ಐಟಮ್‌ಗಳಿದ್ದು(Annexure-A) ಅದರಲ್ಲಿ 208 ಐಟಮ್ ಗಳಿಗೆ ಒಂದಕ್ಕಿಂತ ಹೆಚ್ಚು ಬಿಡ್‌ಗಳು ಬಂದಿದ್ದು ಇವುಗಳನ್ನು ಖರೀದಿಸಲು ಸಮ್ಮತಿಸುತ್ತಾ ನಂತರ 257 ಐಟಮ್‌ಗಳಿಗೆ ಒಬ್ಬರೇ ಬಿಡ್‌ದಾರರು ಭಾಗವಹಿಸಿರುತ್ತಾರೆ. ಸದರಿ ಐಟಂಗಳಿಗೆ ಒಬ್ಬರೇ ಬಿಡ್‌ದಾರರು ಆಗಿದ್ದರೂ ಸಹ ಸದರಿ 257 ಐಟಮ್‌ಗಳು ಅತ್ಯಾವಶ್ಯಕವಾಗಿ ಬೇಕಾಗಿದೆ ಎಂದು ನಿರ್ದೇಶಕರು ಮತ್ತು ಹಾಜರಿದ್ದ ವಿಭಾಗದ ಮುಖ್ಯಸ್ಥರು ಕೋರಿದ್ದರಿಂದ ಹಾಗೂ ಇವರ ದರವು ಮಾರುಕಟ್ಟೆ ದರಕ್ಕೆ ಹೋಲಿಕೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದ ಕಾರಣ ಖರೀದಿಸಲು ಸಮ್ಮತಿಸಲಾಯಿತು ಹಾಗೂ ಸದರಿ ಐಟಮ್‌ಗಳ ದರಗಳನ್ನು ವಿಭಾಗದ ಮುಖ್ಯಸ್ಥರುಗಳು ಈ ಹಿಂದೆ ಸರಬರಾಜು ಮಾಡಿರುವ ದರ ಹಾಗೂ ಈಗಿರುವ ಮಾರುಕಟ್ಟೆ ದರಕ್ಕೆ ಹೋಲಿಕೆ ಮಾಡಿ ಪರಿಶೀಲಿಸಿ ಸಲ್ಲಿಸಿರುವ ದರಗಳ ಪಟ್ಟಿಯನ್ನು ಪರಿಶೀಲಿಸಿ ಮಾರುಕಟ್ಟೆ ದರಕ್ಕಿಂತ ಹೆಚ್ಚಿರುವ ಕೆಲವು items ಗಳಿಗೆ ನಮೂದಿಸಿರುವ ದರಗಳು ಹಿಂದಿನ ವರ್ಷಕ್ಕೆ ಹೋಲಿಸಿದರೆ 15% ಕ್ಕೂ ಹೆಚ್ಚಾಗಿರುವುದಾಗಿ ಕಂಡು ಬಂದಿದ್ದರಿಂದ, ಅವಶ್ಯಕತೆಯ ಬಗ್ಗೆ ವಿಭಾಗಗಳ ಮುಖ್ಯಸ್ಥರ ಅಭಿಪ್ರಾಯದ ಮೇರೆಗೆ Chemical items no.39,49,51, 81,129,143,146,147,148,158170,191,203,210 Glassware item no 22,41,45,46,47,48,49,50,64,72,76, Reagent Kits item no9,13,24,47,48 62 ಮತ್ತು Discs item no35,36,40,57,58,59,60,74 ಐಟಂಗಳಿಗೆ ಮತ್ತು ಯಾವುದೇ ಬಿಡ್ ಬಾರದ 37 ಐಟಂಗಳನ್ನು ಸದರಿ ಟೆಂಡರ್ ಖರೀದಿ ಪ್ರಕ್ರಿಯೆಯಿಂದ ಕೈಬಿಟ್ಟು ನಿಯಮಾನುಸಾರ ಸೂಕ್ತ ಕ್ರಮ ವಹಿಸಿ ಖರೀದಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಜೆಂಡಾ–02 – ಟೆಂಡರ್ ಪ್ರಕಟಣೆ ಸಂಖ್ಯೆ: **HIMS /Ten/CL/02/2015–16.** ಈ ಟೆಂಡರ್‌ನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಟೆಂಡರ್‌ನಲ್ಲಿ G.C. ಹಾಗೂ F.C ಯಿಂದ ಅನುಮತಿ ಪಡೆಯಲಾಗಿದೆ ಇದು ಸಭೆಯ ಗಮನಕ್ಕೆ ಬಂದಿರುತ್ತದೆ. ಜಿಲ್ಲಾ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಿರುವ ಬಗ್ಗೆ ಮಾಹಿತಿ ಇದೆ. ಟೆಂಡರ್‌ನ ವಿವಿಧ ಪ್ರಕ್ರಿಯೆಗಳನ್ನು ಮಾಡಿರುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಸಮಿತಿಯ ತೀರ್ಮಾನ:

ಈ ಮೇಲ್ಕಂಡ ವೈದ್ಯಕೀಯ ನಿಯತಕಾಲಿಕೆಗಳ ಬಗ್ಗೆ ಸಂಬಂಧಪಟ್ಟ ವಿಭಾಗದ ವಿಷಯ ತಜ್ಞರೊಂದಿಗೆ ಚರ್ಚಿಸಿ ಮತ್ತು ಸ್ವೀಕೃತಗೊಂಡ ಎಲ್–1 ದರಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ವೈದ್ಯಕೀಯ ನಿಯತಕಾಲಿಕೆಗಳ ಟೆಂಡರ್‌ನಲ್ಲಿ ಒಟ್ಟು 112 ಐಟಮ್‌ಗಳಿದ್ದು (Annexure-B) ಅದರಲ್ಲಿ 109 ಐಟಮ್ ಗಳಿಗೆ ಒಂದಕ್ಕಿಂತ ಹೆಚ್ಚು ಬಿಡ್ ಗಳು ಬಂದಿದ್ದು 03 ಐಟಮ್‌ಗಳಿಗೆ ಒಬ್ಬರೇ ಬಿಡ್‌ದಾರರು ಭಾಗವಹಿಸಿರುತ್ತಾರೆ ಒಬ್ಬರೇ ಬಿಡ್‌ದಾರರು ಭಾಗವಹಿಸಿರುವ 03 ನಿಯತಕಾಲಿಕೆಗಳಿಗೆ ಸಂಬಂಧಿಸಿದಂತೆ ಎಲ್–1 ಆಗಿರುವ ಬಿಡ್‌ದಾರರು ಸದರಿ ನಿಯತಕಾಲಿಕೆಗಳಿಗೆ ಸಂಬಂಧಿಸಿದಂತೆ ಉಳಿಕೆ 109 ನಿಯತಕಾಲಿಕೆಗಳಿಗೆ ಎಲ್–1 ಆಗಿರುವ ಬಿಡ್‌ದಾರರಾದ M/S Prime mag Subscribtion Services Pvt.ltd., ರವರು ಎಲ್–1 ದರದಲ್ಲಿ ಸದರಿ 03 ನಿಯಲಕಾಲಿಕೆಗಳನ್ನು ಸರಬರಾಜು ಮಾಡಲು ಒಪ್ಪಿದ್ದಲ್ಲಿ ತಮ್ಮ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ನಿಯತಕಾಲಿಕೆಗಳ ದರವು ಮಾರುಕಟ್ಟೆ ದರಕ್ಕೆ ಹೋಲಿಕೆಯಾಗುತ್ತಿರುವುದಾಗಿಗೆ ಸಭೆಗೆ ತಿಳಿಸಿದ ಕಾರಣ 112 ವೈದ್ಯಕೀಯ ನಿಯತಕಾಲಿಕೆಗಳನ್ನು M/s. Prime mag Subscribtion Services Pvt.ltd.,ರವರಿಂದ ಖರೀದಿಸುವುದು ಎಂದು ಸಭೆಯಲ್ಲಿ ತಿರ್ಮಾನಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಜೆಂಡಾ-03 - ಟೆಂಡರ್ ಪ್ರಕಟಣೆ ಸಂಖ್ಯೆ: **HIMS/AC/SCP/TSP/04/2015-16** ಈ ಟೆಂಡರ್‌ನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಟೆಂಡರ್‌ನಲ್ಲಿ G.C. ಹಾಗೂ F.C ಯಿಂದ ಅನುಮತಿ ಪಡೆಯಲಾಗಿದೆ ಇದು ಸಭೆಯ ಗಮನಕ್ಕೆ ಬಂದಿರುತ್ತದೆ. ಜಿಲ್ಲಾ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಿರುವ ಬಗ್ಗೆ ಮಾಹಿತಿ ಇದೆ. ಟೆಂಡರ್ ನ ವಿವಿಧ ಪ್ರಕ್ರಿಯೆಗಳನ್ನು ಮಾಡಿರುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

| Sl No. | Items | Bidders Details | Qty | Quoted rate per unti | Negotiated Rate per unit | Status |
|---|---|---|---|---|---|---|
| 1 | Laptops | M/s. Matrix Technoligies inc, Bengaluru | 38 | 55,214.00 | 54,500.00 | L-1 |
| 2 | Printers | M/s. Matrix Technoligies inc, Bengaluru | 38 | 7,600.00 | 7,600.00 | L-1 |

<u>ಸಮಿತಿಯ ತೀರ್ಮಾನ:</u>

ಈ ಮೇಲ್ಕಂಡ ಲ್ಯಾಪ್‌ಟಾಪ್, ಪ್ರಿಂಟರ್ ಮತ್ತು ಸ್ಟೇತೋಸ್ಕೋಪ್‌ಗಳ ಬಗ್ಗೆ ನಿದೇಶಕರೊಂದಿಗೆ ಚರ್ಚಿಸಿ ಮತ್ತು ಸ್ವೀಕೃತಗೊಂಡ ಎಲ್-1 ದರಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಲ್ಯಾಪ್‌ಟಾಪ್, ಪ್ರಿಂಟರ್ ಮತ್ತು ಸ್ಟೇತೋಸ್ಕೋಪ್‌ಗಳಿಗೆ ಸಂಬಂದಿಸಿದಂತೆ ಈ ಮರು ಟೆಂಡರ್‌ನಲ್ಲಿ ಲ್ಯಾಪ್‌ಟಾಪ್ ಮತ್ತು ಪ್ರಿಂಟರ್‌ಗಳಿಗೆ ಒಬ್ಬರೇ ಬಿಡ್‌ದಾರರು Responsive ಆಗಿರುತ್ತಾರೆ. ಸ್ಟೇತೋಸ್ಕೋಪ್‌ಗಳಿಗೆ ಯಾವುದೇ ಬಿಡ್‌ದಾರರು ಭಾಗವಹಿಸಿರುವುದಿಲ್ಲ. ಲ್ಯಾಪ್‌ಟಾಪ್ ಮತ್ತು ಪ್ರಿಂಟರ್‌ಗಳ ಎಲ್-1 ದರಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ನಿರ್ದೇಶಕರೊಂದಿಗೆ ಚರ್ಚಿಸಿದ್ದು, ಈ ಬಗ್ಗೆ ವಿಭಾಗದ ಮುಖ್ಯಸ್ಥರು ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ವಿಭಾಗ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನರವರಿಂದ ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ನಂತರ ಲ್ಯಾಪ್‌ಟಾಪ್ ಮತ್ತು ಪ್ರಿಂಟರ್‌ಗಳಿಗೆ ಸಂಬಂಧಿಸಿದಂತೆ ಎಲ್-1 ದರ ಸಲ್ಲಿಸಿರುವ M/s. Matrix Technoligies inc, Bengaluru ಇವರ ದರವು ಮಾರುಕಟ್ಟೆ ದರಕ್ಕೆ ಹೋಲಿಕೆಯಾಗಿತ್ತಿರುವುದಾಗಿ ಸಭೆಗೆ ತಿಳಿಸಿದ ಕಾರಣ ಖರೀದಿಸಲು ಸಮಿತಿಯು ಅಂಗೀಕರಿಸಿತು ಮತ್ತು ಸ್ಟೇತೋಸ್ಕೋಪ್‌ಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮ ವಹಿಸಿ ಖರೀದಿಸಲು ಸೂಚಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಜೆಂಡಾ-04 - ಟೆಂಡರ್ ಪ್ರಕಟಣೆ ಸಂಖ್ಯೆ: **HIMS/SCH/FOOD/198/2015-16** ಡಯಟ್ ವಿಭಾಗಕ್ಕೆ ಆಹಾರ ಪದಾರ್ಥ ಮತ್ತು ಪ್ರಥಮ ದರ್ಜೆ ಬ್ರೆಡ್ ಖರೀದಿಸುವ ಕುರಿತು. ಈ ಟೆಂಡರ್‌ನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಟೆಂಡರ್‌ನಲ್ಲಿ G.C. ಹಾಗೂ F.C ಯಿಂದ ಅನುಮತಿ ಪಡೆಯಲಾಗಿದೆ ಇದು ಸಭೆಯ ಗಮನಕ್ಕೆ ಬಂದಿರುತ್ತದೆ. ಜಿಲ್ಲಾ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಿರುವ ಬಗ್ಗೆ ಮಾಹಿತಿ ಇದೆ. ಟೆಂಡರ್ ನ ವಿವಿಧ ಪ್ರಕ್ರಿಯೆಗಳನ್ನು ಮಾಡಿರುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

| ಕ್ರ. ಸಂ | ಟೆಂಡರ್ ಕರೆದಿದ್ದ ಆಹಾರ ಪದರ್ಥಗಳು | ವ್ಯವಸ್ಥಾಪಕರು, ಕೆ.ಎಸ್.ಸಿ.ಸಿ.ಎಫ್, ಹಾಸನ | ದರ ನಿಷ್ಕರ್ಷೆ | ರಮೇಶ್ ಹಾಸನ | ದರನಿಷ್ಕರ್ಷೆ |
|---|---|---|---|---|---|
| 1 | Tur Dhall | 189.00 | | **186.00 L-1** | **155.00 L-1** |
| 2 | Fresh Vegetables | **40.00 L-1** | **20.00 L-1** | 43.00 | |
| 3 | Ground Nut Oil | **98.00 L-1** | **96.00 L-1** | 99.00 | |
| 4 | Tamarind | **87.50 L-1** | **77.00 L-1** | 90.00 | |
| 5 | Onion | 30.00 | | **24.00 L-1** | **15.00 L-1** |
| 6 | Iodized Salt | 18.00 | | **12.00 L-1** | **12.00 L-1** |
| 7 | Coconuts Big size | 30.00 | | **24.00 L-1** | **13.00 L-1** |
| 8 | Coffee powder (Reguler) | 300.00 | | **282.00 L-1** | **280.00 L-1** |
| 9 | Sambar Powderd | 350.00 | | **340.00 L-1** | **340.00 L-1** |
| 10 | First Quality Suger | **42.00 L-1** | **37.00 L-1** | | |
| 11 | Banana big size | 50.00 | | **48.00 L-1** | **39.00 L-1** |
| 12 | Egg | **4.70 L-1** | **4.33 L-1** | 4.90.00 | |
| 13 | Sona Rice | **46.00 L-1** | **40.00 L-1** | 48.50 | |
| 14 | Dry Chillies | **145.00 L-1** | **141.00 L-1** | 149.00 | |

ಪ್ರಥಮ ದರ್ಜೆ ಬ್ರೆಡ್

| | | ಶಾರದಮ್ಮ, ಹಾಸನ | ದರನಿಷ್ಕರ್ಷೆ | ಅಪ್ಪಾಜಿಗೌಡ,ಹಾಸನ | ರಮೇಶ್ ,ಹಾಸನ |
|---|---|---|---|---|---|
| 15 | Bread First Quality | **88.00 L-1** | **88.00 L-1** | 91.00 | 92.00 |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸಮಿತಿಯ ತೀರ್ಮಾನ:

ಈ ಮೇಲ್ಕಂಡ ಆಹಾರ ಪದಾರ್ಥ ಮತ್ತು ಪ್ರಥಮ ದರ್ಜೆ ಬ್ರೆಡ್ ಬಗ್ಗೆ ನಿದೇಶಕರೊಂದಿಗೆ ಚರ್ಚಿಸಿ ಮತ್ತು ಸ್ವೀಕೃತಗೊಂಡ ಎಲ್-1 ದರಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಆಹಾರ ಪದಾರ್ಥ ಮತ್ತು ಪ್ರಥಮ ದರ್ಜೆ ಬ್ರೆಡ್‌ಗಳಿಗೆ ಸಂಬಂದಿಸಿದಂತೆ ಕೆ.ಎಸ್.ಸಿ.ಸಿ.ಎಫ್, ಹಾಸನ ಇವರು ಕ್ರಮ ಸಂಖ್ಯೆ 02, 04, 05, 08, 10, 13 ಮತ್ತು 14 ಈ ಐಟಂಗಳಿಗೆ ಕಡಿಮೆ ದರ ನಮೂದಿಸಿ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ರಮೇಶ್, ಹಾಸನ ಇವರು ಕ್ರಮ ಸಂಖ್ಯೆ 01, 03, 06, 07, 09 11 ಮತ್ತು 12 ಈ ಐಟಂಗಳಿಗೆ ಕಡಿಮೆ ದರ ನಮೂದಿಸಿ ಎಲ್-1 ಟೆಂಡರ್‌ದಾರರಾಗಿರುತ್ತಾರೆ ಮತ್ತು ಶಾರದಮ್ಮ, ಹಾಸನ ಇವರು ಕ್ರಮ ಸಂಖ್ಯೆ 15 ಈ ಐಟಂಗೆ ಕಡಿಮೆ ದರ ನಮೂದಿಸಿ ಎಲ್-1 ಟೆಂಡರ್‌ದಾರರಾಗಿರುತ್ತಾರೆ ಇವರ ದರವು ಮಾರುಕಟ್ಟೆ ದರಕ್ಕೆ ಹೋಲಿಕೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದ ಕಾರಣ ಸರಬರಾಜು ಪಡೆಯಲು ಸಮಿತಿಯು ಅಂಗೀಕರಿಸಿತು.

ಸಭೆಯನ್ನು ಗೌರವಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | |
|---|---|---|
| ಡಾ. ಹರಸೂರ್ ಎಸ್.ಎಸ್.,<br>ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಬೆಂಗಳೂರು.<br>ಖರೀದಿ ಸಮಿತಿಯ ಅಧ್ಯಕ್ಷರು. | ಡಾ. ಬಿ.ಸಿ.ರವಿಕುಮಾರ್,<br>ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,<br>ಸದಸ್ಯರು. | ಡಾ. ವಿಠ್ಠಲ್ ಬಿ.ಜಿ.<br>ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು<br>ಜೀವರಸಾಯನ ಶಾಸ್ತ್ರ ವಿಭಾಗ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. ಸದಸ್ಯರು |

| | |
|---|---|
| ಡಾ.ವೆಂಕಟೇಶ್ ಪಿ.ಟಿ.<br>ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು<br>ಮೈಕ್ರೋಜೀವ ಶಾಸ್ತ್ರ ವಿಭಾಗ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.<br>ಸದಸ್ಯರು | ಶ್ರೀ. ದೇವಯ್ಯ,<br>ಮುಖ್ಯ ಆಡಳಿತಾಧಿಕಾರಿಗಳು,(ಪ್ರಭಾರ)<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ, ಸದಸ್ಯರು. |